1

# ಅಬ್ರಹಾಮನೊಂದಿಗೆ ದೇವರ ಒಡಂಬಡಿಕೆ

## ಹೂಗೋ ಮೆಕ್ಕೊರ್ಡ್

"ಒಡಂಬಡಿಕೆ" ಎಂಬ ಪದವು (ಆದಿಕಾಂಡ 15:18) *barah* ಎಂಬ ಮೂಲ ಪದದಿಂದ ಬಂದಿದೆ. ಅದರ ಅರ್ಥ "to cut" ಎಂದಾಗುತ್ತದೆ. ಒಡಂಬಡಿಕೆಯು ಒಂದು ಬಂಧನ, ಮುದ್ರೆ ಹಾಕಲ್ಪಟ್ಟ ಒಪ್ಪಂದ ಆಗಿತ್ತು. *Karath berith* ಎಂಬ ಹಿಬ್ರೂ ಮಾತಿನ ಅಕ್ಷರಶಃ ಅರ್ಥವು "ಒಂದು ಒಡಂಬಡಿಕೆಯನ್ನು ಕೊಯ್ಯಿ" ಎಂದಾಗುತ್ತದೆ. "ಒಂದು ಒಡಂಬಡಿಕೆಯನ್ನು ಮಾಡಿಕೋ" ಎಂದು ಸಾಮಾನ್ಯವಾಗಿ ಭಾಷಾಂತರಿಸಲ್ಪಟ್ಟಿದೆ.

### ಒಂದು ಸಂತತಿಯ ವಾಗ್ದಾನ

ವರ್ಷಗಳವರೆಗೆ ದೇವರು ಅಬ್ರಹಾಮನಿಗೆ ಬಾಧ್ಯಸ್ಥನ ಬಗ್ಗೆ ವಾಗ್ದಾನ ಮಾಡುತ್ತಲೇ ಇದ್ದನು (ಆದಿಕಾಂಡ 12:7; 13:15). ವರ್ಷಗಳು ದಾಟಿಹೋದಂತೆ ಮಕ್ಕಳಿಲ್ಲದ ಅಬ್ರಹಾಮನು ತನ್ನ ಮನೆಯಲ್ಲಿ "ಮೆಲ್ಚಿಚಾರಕನು" ಕಾನೂನು ಬದ್ಧವಾಗಿ ಸ್ವಾಸ್ತ್ಯಗಳನ್ನು ಹೊಂದಿಕೊಳ್ಳುವನು ಎಂದು ಹೇಳಿದನು. ಹಾಗಿದ್ದಾಗ, ದೇವರು ಅಬ್ರಹಾಮನ ದೇಹದಿಂದಲೇ ವಾರಸುದಾರನು ಬರುವನು ಎಂದು ಭರವಸೆ ಕೊಟ್ಟನು (ಆದಿಕಾಂಡ 15:4). ಕ್ರಮೇಣವಾಗಿ ಅವನ ವಂಶವು ನಕ್ಷತ್ರಗಳಂತೆ ಅಗಣಿತವಾದದ್ದಾಗುವುದು. ಆಬ್ರಹಾಮನ ವಂಶಜರು ಮತ್ತು ಅವನ ಸ್ವಂತ ಮಗ, ಇಸಾಕನ ವಂಶಜರು, ಭೂಲೋಕದಲ್ಲಿ ಜೀವಿಸಿದ ಮಿಲಿಯನ್‌ಗಟ್ಟಲೆ ಇಬ್ರಿಯರು, ದೇವರು ತನ್ನ ಮಾತನ್ನು ನೆರವೇರಿಸಿದ್ದಕ್ಕೆ ಪುರಾವೆಯಾಗಿದ್ದಾರೆ. ಅತೀ ದೊಡ್ಡ "ವಂಶಜನು" ಕ್ರಿಸ್ತನು (ಗಲಾತ್ಯ 3:16), ಆತನ ಮುಖಾಂತರ - ಇಬ್ರಿಯರು ಅಷ್ಟೇ ಅಲ್ಲ ಆದರೆ ಅನ್ಯರೂ ಸಹ (ಪ್ರಕಟನೆ 7:4, 9) - ಅಬ್ರಹಾಮನ ಮಕ್ಕಳಾದರು (ಗಲಾತ್ಯ 3:29).

### ಒಂದು ದೇಶದ ವಾಗ್ದಾನ

ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ "cut" ಒಡಂಬಡಿಕೆಯು ಬಹಳ ಜನ ಬಾಧ್ಯಸ್ಥರನ್ನು ಒಳಗೊಂಡದ್ದಲ್ಲದೇ, ಅವರಿಗೆ ಜೀವಿಸುವದಕ್ಕಾಗಿ ಒಂದು ಸ್ಥಳವನ್ನು, ಐಗುಪ್ತರಿಂದ ಅಸ್ಸೀರಿಯದ ವರೆಗೆ ಚಾಚಿರುವ ಸ್ಥಳವನ್ನು ಒದಗಿಸಿತು. ವಾಗ್ದಾನವು ನೆರವೇರುವುದಕ್ಕಿಂತ ಮೊದಲು ಬಹಳ ಸಮಯ ದಾಟಿತೆಂಬಂತೆ ತೋರುತ್ತದೆ (ನೋಡಿರಿ ಆದಿಕಾಂಡ 15:13), ಆದರೆ ದೇವರು ತಾನೇ ಅದನ್ನು ಕೈಕೊಳ್ಳಲು ಒಪ್ಪಿಕೊಂಡಿದ್ದನು. ನಾಲ್ಕನೂರ ಮೂವತ್ತು ವರ್ಷಗಳ ನಂತರ (ವಿಮೋಚನ ಕಾಂಡ 12:40) ಅಬ್ರಹಾಮನ ಮುಂದಿನ ಪೀಳಿಗೆಯು ವಾಗ್ದಾತ್ತ ದೇಶದ ಕಡೆಗೆ ಹೊರಟಿತು. ಕೊನೆಗೆ, "ಯೆಹೋವನು ಇಸ್ರಾಯೇಲ್ಯರ ಪೂರ್ವಿಕರಿಗೆ ಪ್ರಮಾಣ ಪೂರ್ವಕವಾಗಿ ವಾಗ್ದಾನ ಮಾಡಿದ ದೇಶವನ್ನು ಇಸ್ರಾಯೇಲ್ಯರಿಗೆ ಕೊಟ್ಟನು. ಅವರು ಅದನ್ನು ಸ್ವತಂತ್ರಿಸಿಕೊಂಡು ಅದರಲ್ಲಿ ವಾಸ ಮಾಡಿದರು" (ಯೆಹೋಶುವ 21:43; ನೋಡಿರಿ

23:14; ನ್ಯಾಯಸ್ಥಾಪಕರು 2:1; 1 ಅರಸುಗಳು 4:21). ದೇವರು ತನ್ನ ಮಾತನ್ನು ಇನ್ನೂ ನೆರವೇರಿಸಿಲ್ಲ ಎಂದು ಇಂದು ಹೇಳುವುದು ದುರದೃಷ್ಟದ ಸಂಗತಿಯಾಗಿದೆ. ಪ್ರಿಮಿಲ್ಲೆನ್ನಿಯಲಿಸ್ಟರು ದೇವರನ್ನು ತೊಡಕಿನ ಸ್ಥಾನದಲ್ಲಿಡುತ್ತಾರೆ.

## ಅತೀ ಮಹತ್ವದ ವಾಗ್ದಾನ

ಆದಿಕಾಂಡ 15 ಎಲ್ಲವೂ ಮುಖ್ಯವಾದದ್ದಾಗಿದೆ; ಆದರೆ ಒಂದು ವಚನವು ವಿಶೇಷ ವಾಗಿ ಮುಖ್ಯವಾದದ್ದು. ನಾವು ಹೇಗೆ ರಕ್ಷಿಸಲ್ಪಟ್ಟಿದ್ದೇವೆ ಎಂದು ಅರ್ಥ ಮಾಡಿಕೊಳ್ಳಲು ನಮಗೆ ಸಹಾಯ ಮಾಡುವಂತೆ 6ನೇ ವಚನವು ರೋಮಾಪುರ 4:3, ಗಲಾತ್ಯ 3:6, ಮತ್ತು ಯಾಕೋಬ 2:23ರಲ್ಲಿ ಉಪಯೋಗಿಸಲ್ಪಟ್ಟಿದೆ.

ಅಬ್ರಹಾಮನು ದೇವರನ್ನು "ನಂಬಿದನು" ಎಂದು ಮೋಶೆ ಒಪ್ಪಿಕೊಂಡಾಗ, ದೇವರು ಅಸ್ತಿತ್ವದಲ್ಲಿದ್ದಾನೆ ಎಂಬ ಮಾನಸಿಕ ಒಪ್ಪಿಗೆಯ ಬಗ್ಗೆ ಅವನು ಮಾತಾಡುತ್ತಿರುವದಿಲ್ಲ. ಒಡಂಬಡಿಕೆಯು ಕೊಡಲ್ಪಡುವ ಮೊದಲು ಅಬ್ರಹಾಮನು ದೇವರಲ್ಲಿ ನಂಬಿದನು. (ಅವನು ತನ್ನ ತಂದೆಯ ವಿಗ್ರಹಾರಾಧನೆಯಲ್ಲಿ ಎಂದೂ ಭಾಗ ವಹಿಸಿರಲಿಕ್ಕಿಲ್ಲ). ಇದಲ್ಲದೇ ಅವನು ತನ್ನ ಸ್ವಂತ ರಕ್ತದ ಬಾಧ್ಯಸ್ಥನು ಇರುವನೆಂಬ ದೇವರ ವಾಗ್ದಾನದಲ್ಲಿ ನಂಬಿಕೆ ಇಟ್ಟಿದ್ದನು. ಆ ನಂಬಿಕೆಯು ನೀತಿಯೆಂದು ಅವನ ಲೆಕ್ಕಕ್ಕೆ ವಿಶ್ವಾಸಾರ್ಹತೆ ಹೊಂದಿತು.

ಅಬ್ರಹಾಮನ ವಿಶ್ವಾಸವು ಮೋಶೆಯ ಧರ್ಮಶಾಸ್ತ್ರದ ಕೃತ್ಯಗಳಿಂದ ಸಂಪೂರ್ಣ ವಾಗಿ ಬೇರೆಯಾಗಿತ್ತು (ರೋಮಾಪುರ 3:28; 4:2-5; ಗಲಾತ್ಯ 2:16; 3:5). ಸಿನಾಯಿ ಪರ್ವತದ ಬಳಿಯಲ್ಲಿ ಕ್ರಿಯೆಗಳ ಧರ್ಮಶಾಸ್ತ್ರವು ಕೊಡಲ್ಪಡುವದರ ಎಷ್ಟೋ ಮೊದಲೇ ಅಬ್ರಹಾಮನು ತನ್ನ ಬಹುಮಾನಕ್ಕೆ ಹೊರಟು ಹೋಗಿದ್ದನು. ಇಂದು, ಕ್ರಿಸ್ತನ ಬಗ್ಗೆ ದೇವರ ವಾಕ್ಯದಲ್ಲಿ ಮನುಷ್ಯನ ವಿಶ್ವಾಸವು (ರೋಮಾಪುರ 4:23-25) ನೀತಿಯೆಂದು ಗುರುತಿಸಲ್ಪಟ್ಟಿದೆ ಮತ್ತು ಅಂಥ ವಿಶ್ವಾಸವು ಮೋಶೆಯ ಧರ್ಮಶಾಸ್ತ್ರದ ಕ್ರಿಯೆಗಳಿಗೆ ಸಂಬಂಧಿಸಿರುವದಿಲ್ಲ. ಎರಡನ್ನು ಜೋಡಿಸಲು ಒಬ್ಬನು ಪ್ರಯತ್ನಿಸಿದರೆ, ಕ್ರಿಸ್ತನನ್ನು ಪರಿಣಾಮವಿಲ್ಲದವನನ್ನಾಗಿ ಮಾಡುತ್ತಾನೆ (ಗಲಾತ್ಯ 5:4).

ಆಬ್ರಹಾಮನ ನಂಬಿಕೆಯು ನಂಬಿಕೆ ಮಾತ್ರವೇ ಆಗಿರಲಿಲ್ಲ. ಅವನ ನಂಬಿಕೆಯ "ಹೆಜ್ಜೆಗಳು" (ರೋಮಾಪುರ 4:12) ಅನೇಕವಾಗಿದ್ದವು; ನೂರಾರು ಮೈಲುಗಳ ವರೆಗೆ ಅನೇಕ ರಾಷ್ಟ್ರಗಳ ಮುಖಾಂತರ ಪ್ರಯಾಣ ಮಾಡಿದನು. ಅದಲ್ಲದೇ, ಆದಿಕಾಂಡ 15:6ರಲ್ಲಿ ನಾವು ಓದುವ ನಂಬಿಕೆಯು, ಅಬ್ರಹಾಮನು ತನ್ನ ಒಬ್ಬನೇ ಮಗನನ್ನು ಯಜ್ಞವಾಗಿ ಅರ್ಪಿಸಲು ಕತ್ತಿಯನ್ನು ತೆಗೆದು ಕೊಳ್ಳುವವರೆಗೆ, ನಿಜವಾಗಿಯೂ ನೆರವೇರ ಲಿಲ್ಲ (ಯಾಕೋಬ 2:23).

ರೋಮಾಪುರ ಮತ್ತು ಗಲಾತ್ಯದವರ ಪತ್ರಿಕೆಗಳಲ್ಲಿ ವಿವರಿಸಿದ ವಿಶ್ವಾಸವು ಧರ್ಮಶಾಸ್ತ್ರದ ಕ್ರಿಯೆಗಳನ್ನು ಹೊರತುಪಡಿಸಿದ್ದಾಗಿದ್ದರೂ, ಯಾವುದೇ ರೀತಿಯಲ್ಲಿ ನಂಬಿಕೆಯ ವಿಧೇಯತೆಯನ್ನು ಹೊರತು ಪಡಿಸಿರುವದಿಲ್ಲ (ರೋಮಾಪುರ 1:5; 16:26). ಪ್ರತಿಯೊಂದು ಸಲ ನಂಬಿಕೆಯು ನಮೂದಿಸಲ್ಪಟ್ಟಾಗ, ವಿಶ್ವಾಸದ ವಿಧೇಯ ತೆಯ ವಿವರಗಳು ಮುಂದಿಡಲ್ಪಟ್ಟಿರುವದಿಲ್ಲ. ಉದಾಹರಣೆಯಾಗಿ ರೋಮಾಪುರ 5:1ರ ವಿಶ್ವಾಸವು ಈ ವಿಷಯಗಳನ್ನು ಹೇಳುವದಿಲ್ಲ: (1) ದೇವರು ಅಸ್ತಿತ್ವದಲ್ಲಿ ಇರುತ್ತಾನೆ ಇಲ್ಲವೇ ಕ್ರಿಸ್ತನು ಆತನ ಕುಮಾರನಾಗಿರುತ್ತಾನೆ ಎಂದು ಮಾನಸಿಕವಾಗಿ ನಂಬುವುದು, (2) ಮಾನಸಾಂತರ ಪಡುವುದು, (3) ಅರಿಕೆ ಮಾಡುವುದು, ಇಲ್ಲವೇ, (4) ಬಾಪ್ತಿಸ್ಮ

ಹೊಂದುವುದು (ನೋಡಿರಿ ರೋಮಾಪುರ 6:3, 4). ಹೀಗಿದ್ದರೂ, ಎಲ್ಲಾ ನಾಲ್ಕೂ ಸಂಗತಿಗಳು ನೀತಿನಿರ್ಣಯವನ್ನು ತರುವ, ಎಲ್ಲವನ್ನೂ ಒಳಗೊಂಡ "ನಂಬಿಕೆ"ಯಲ್ಲಿ ಒಂದುಗೂಡಿಸಲ್ಪಟ್ಟಿರುತ್ತವೆ. ದೇವರ ಮಕ್ಕಳನ್ನಾಗಿ ಮಾಡುವ ಗಲಾತ್ಯ 3:26ರ ನಂಬಿಕೆಯು ಮಾನಸಾಂತರವನ್ನು ಇಲ್ಲವೇ ಬಾಪ್ತಿಸ್ಮವನ್ನು ನಮೂದಿಸುವದಿಲ್ಲ, ಆದರೆ ಮುಂದಿನ ವಚನವು ನಂಬಿಕೆಯು ಬಾಪ್ತಿಸ್ಮವನ್ನು ಒಳಗೊಂಡಿರುವುದನ್ನು ತೋರಿಸುತ್ತದೆ.

ಒಬ್ಬನು ಕ್ರಿಸ್ತನನ್ನು ಧರಿಸಿಕೊಂಡಿರದಿದ್ದರೆ, ಅವನು ದೇವರ ಮಗುವಾಗಿರಲಾರನು. ಒಬ್ಬನು ಬಾಪ್ತಿಸ್ಮ ಹೊಂದುವವರೆಗೆ ಕ್ರಿಸ್ತನನ್ನು ಧರಿಸಿಕೊಳ್ಳಲಾರನಾದುದರಿಂದ ದೇವರ ಮಕ್ಕಳನ್ನಾಗಿ ಮಾಡುವ ನಂಬಿಕೆಯು ಬಾಪ್ತಿಸ್ಮವನ್ನು ಒಳಗೊಂಡಿರುತ್ತದೆ, ನಂಬಿಕೆಯು (ಅದು ಒಳಗೊಂಡಿರುವ ಎಲ್ಲದರೊಂದಿಗೆ) ತಾನೇ ಕ್ರಿಯೆಯಾಗಿದೆ (ಯೋಹಾನ 6:29). ಆದರೆ ಅದು ದೇವರ ಕಾರ್ಯವಾಗಿದೆ. ಮನುಷ್ಯನ ಯಾವುದೇ ಕಾರ್ಯವು (ಎಫೆಸ 2:8, 9) ರಕ್ಷಣೆಯ ಫಲವನ್ನು ಕೊಡುವದಿಲ್ಲ.

© 2009 Truth for Today